# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **283** |
| ಉತ್ತರಿಸಬೇಕಾದ ದಿನಾಂಕ | : | 14.09.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ತಾಲ್ಲೂಕು, ಕೊತ್ತತ್ತಿ ಹೋಬಳಿ, ಸುಂಡಹಳ್ಳಿ ಗ್ರಾಮದ ಸರ್ವೆ ನಂ.89 ರಲ್ಲಿ ಡಿಸೆಂಬರ್ 1993 ರ ಅವಧಿಯಲ್ಲಿ ಆಶ್ರಯ ಯೋಜನೆಯಡಿ ಉಚಿತವಾಗಿ ಹಂಚಲಾಗಿದ್ದ ನಿವೇಶನಗಳ ಫಲಾನುಭವಿಗಳು ಪರವಾನಗಿ ಪಡೆಯದೆ ಅಕ್ರಮವಾಗಿ ಅಳತೆಗಿಂತ ಹೆಚ್ಚುವರಿ ಅಳತೆಯ ಕಟ್ಟಡವನ್ನು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಮಂಡ್ಯ ತಾಲ್ಲೂಕಿನ, ಕೊತ್ತತ್ತಿ ಹೋಬಳಿ, ಸುಂಡಹಳ್ಳಿ ಗ್ರಾಮದ ಸರ್ವೆ ನಂ.89ರಲ್ಲಿ ಡಿಸೆಂಬರ್ 1993ರ ಅವಧಿಯಲ್ಲಿ ಆಶ್ರಯ ಯೋಜನೆಯಡಿ ಸರ್ಕಾರದಿಂದ ಉಚಿತವಾಗಿ ಹಂಚಿಕೆ ಮಾಡಲಾದ ನಿವೇಶನಗಳ ಪೈಕಿ ತಹಶೀಲ್ದಾರ್ ರವರ ಹಕ್ಕುಪತ್ರ ಸಂಖ್ಯೆ 28360/1993-94, ದಿನಾಂಕ:14.12.1993ರಲ್ಲಿ 5ನೇ ಸಂಖ್ಯೆ ನಿವೇಶನದ ಪೂರ್ವ-ಪಶ್ಚಿಮ 30 ಅಡಿ ಮತ್ತು ಉತ್ತರ-ದಕ್ಷಿಣ 40 ಅಡಿ ವಿಸ್ತೀರ್ಣವುಳ್ಳ ನಿವೇಶನವನ್ನು ಆಶ್ರಯ ಯೋಜನೆಯಡಿ ಬಸವಣ್ಣ ಬಿನ್ ನಂಜಪ್ಪರವರಿಗೆ ನೀಡಲಾಗಿದೆ, ದಿನಾಂಕ: 12.08.2011 ರಲ್ಲಿ ಭದ್ರಮ್ಮ ಕೋಂ ಲೇಟ್ ಲಿಂಗಯ್ಯ ಕೆ. ರವರಿಗೆ ಕ್ರಯ ಮಾಡಲಾಗಿದ್ದು, ಕ್ರಯಪತ್ರದ ಆಧಾರದ ಮೇಲೆ ಇಂಡವಾಳು ಗ್ರಾಮ ಪಂಚಾಯಿತಿಯಲ್ಲಿ ಖಾತೆ ನಂ.314/314/4 ರಲ್ಲಿ ನಿವೇಶನ ದಿನಾಂಕ:11.08.2012 ರಲ್ಲಿ ನಂ. 5108 ರ ಖಾತೆಯಾಗಿದ್ದು, ನಂತರ ಸದರಿ ನಿವೇಶನವು ದಾನಪತ್ರದ ಸಂಖ್ಯೆ: 8106, ದಿನಾಂಕ: 10.11.2014 ರಂದು ಉಪನೋಂದಣಿ ಅಧಿಕಾರಿಗಳ ಮುಖಾಂತರ ಎಸ್.ಎಲ್. ಶಿವರಾಜು ಬಿನ್ ಕೆ. ಲಿಂಗಯ್ಯರವರಿಗೆ ನೋಂದಣಿಯಾಗಿರುತ್ತದೆ.<br><br>ಸದರಿ ಪತ್ರದ ಆಧಾರದ ಮೇಲೆ ಖಾತೆ ಮಾಡಿ ಎಸ್.ಎಲ್. ಶಿವರಾಜು ಬಿನ್ ಕೆ. ಲಿಂಗಯ್ಯರವರ ಹೆಸರಿನಲ್ಲಿ ಕಟ್ಟಡದ ಪರವಾನಿಗೆ ನಂ.42, ದಿನಾಂಕ: 18.11.2014 ರಂದು ಪೂರ್ವ-ಪಶ್ಚಿಮ 28 ಅಡಿ ಉತ್ತರ-ದಕ್ಷಿಣ 38 ಅಡಿಗಳಿಗೆ ಪರವಾನಗಿ ನೀಡಿರುತ್ತಾರೆ. ಹಕ್ಕುಪತ್ರ ನೀಡಿರುವ ಸ್ಥಳದಲ್ಲಿಯೇ ಕಟ್ಟಡ ನಿರ್ಮಾಣ ಮಾಡಲಾಗಿದ್ದು, ಪೂರ್ವಕ್ಕೆ-3 ನೇ ನಿವೇಶನ, ಪಶ್ಚಿಮಕ್ಕೆ-5ನೇ ನಿವೇಶನ, ಉತ್ತರಕ್ಕೆ-ರಸ್ತೆ ಮತ್ತು ದಕ್ಷಿಣಕ್ಕೆ-ರಸ್ತೆ, ಈ ಮಧ್ಯೆ ಪರವಾನಗಿ ಪಡೆದಿರುವ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡಿ ಅಳತೆ ಮೀರಿ ಹೆಚ್ಚುವರಿ 12 ಅಡಿ ಕಟ್ಟಡವನ್ನು ನಿರ್ಮಿಸಿರುತ್ತಾರೆ ಮತ್ತು ಉತ್ತರ ಭಾಗದಲ್ಲಿ ಶೀಟ್ ಅಳವಡಿಸಿರುವುದಾಗಿ ಹಾಗೂ ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತಿ, ಮಂಡ್ಯ ಮತ್ತು ತಹಸೀಲ್ದಾರ್, ಮಂಡ್ಯ ಇವರು ನಿಯಮಾನುಸಾರ ಜಂಟಿ ಪರಿಶೀಲನೆ ನಡೆಸಿ, ಒಂದು ತಿಂಗಳೊಳಗಾಗಿ ಅಕ್ರಮ ಕಟ್ಟಡವನ್ನು ತೆರವುಗೊಳಿಸಲು ಕ್ರಮವಹಿಸುವುದಾಗಿ ಜಿಲ್ಲಾ ಪಂಚಾಯಿತಿ ಮಂಡ್ಯ ಜಿಲ್ಲೆ ಇವರು ವರದಿ ಮಾಡಿರುತ್ತಾರೆ. |
| ಆ) | ಹಾಗಿದ್ದಲ್ಲಿ, ಈ ಬಗ್ಗೆ ಪೂರ್ಣ ವಿವರಗಳನ್ನು ಒದಗಿಸುವುದು ; | |
| ಇ) | ಹೆಚ್ಚುವರಿ ಕಟ್ಟಡವನ್ನು ತೆರವುಗೊಳಿಸಲಾಗಿದೆಯೇ ; | |
| ಈ) | ಇಲ್ಲದಿದ್ದಲ್ಲಿ ಯಾವ ಕಾಲಮಿತಿಯಲ್ಲಿ ತೆರವುಗೊಳಿಸಲಾಗುವುದು ; (ವಿವರ ನೀಡುವುದು) | |
| ಉ) | ಸದರಿ ಆಶ್ರಯ ಕಟ್ಟಡವನ್ನು ನೈಜ ಹಂಚಿಕೆಯ ಸ್ಥಳದಲ್ಲಿ ನಿರ್ಮಿಸಿದ್ದಾರೆಯೇ ? (ವಿವರಗಳೊಂದಿಗೆ ಮಾಹಿತಿ ನೀಡುವುದು) | |

ಸಂಖ್ಯೆ :ವಇ 367 ಹೆಚ್ಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು